ದಿನಾಂಕಃ 08-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ಪ್ರತಿವಾದಿ ಪರವಾಗಿಃ ಶ್ರೀ. ಎಸ್.ಎಸ್. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳೆಲ್ಲಾ ಸರಿಯಾಗಿವೆ ಮತ್ತು ಸತ್ಯವಾಗಿವೆ ಎಂದು ಪ್ರಮಾಣೀಕರಿಸಿ ನನ್ನ ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ- ವಾದಿ ಪರ ಶ್ರೀ ಬಿ.ಹೆಚ್.ಪಿ. ವಕೀಲರಿಂದಃ-**

ಭೀಮಣ್ಣನಿಗೆ ಇಬ್ಬರು ಹೆಂಡತಿಯರು ಇದ್ದು, ಅವರುಗಳೆಂದರೆ ಸಣ್ಣಮ್ಮ ಎಂಬುವವರಾಗಿದ್ದು ಮತ್ತೊಬ್ಬರ ಹೆಸರು ನನಗೆ ಗೊತ್ತಿಲ್ಲ. ಈಗ ಸಣ್ಣಮ್ಮನವರು ನ್ಯಾಯಾಲಯ ಮುಂದೆ ಇರುವುದಿಲ್ಲ. ಭೀಮಣ್ಣನ ಮೊದಲನೇ ಹೆಂಡತಿಗೆ ಇಬ್ಬರು ಹೆಣ್ಣು ಮಕ್ಕಳುಗಳಿದ್ದು, ಅವರುಗಳೆಂದರೆ ಪುಷ್ಪಲತಾ ಮತ್ತು ಮಮತಾ ಎಂಬುವವರಾಗಿರುತ್ತಾರೆ ಹಾಗೂ ಎರಡನೇ ಹೆಂಡತಿಗೆ ಇಬ್ಬರು ಗಂಡು ಮಕ್ಕಳುಗಳಿದ್ದಾರೆ. ಪುಷ್ಪಲತಾರವರಿಗೆ ಕಳೆದ 12 ರಿಂದ 15 ವರ್ಷಗಳ ಹಿಂದೆ ಮದುವೆ ಆಗಿರುತ್ತದೆ. ಮದುವೆಯ ಸಮಯದಲ್ಲಿ ಕೊರಳ ಚೈನ್ ಮತ್ತು ಕೈ ಚೈನ್‌ಗಳನ್ನು ಕೊಟ್ಟು ಮದುವೆ ಮಾಡಲಾಗಿತ್ತು. ಆ ಒಡವೆಗಳನ್ನು ಮಾಡಿಸುವ ಸಮಯದಲ್ಲಿ ಹಾಗೂ ಕೊಟ್ಟ ಸಮಯದಲ್ಲಿ ನಾನು ಸಹ ಇದ್ದೆನು. ಆ ಮದುವೆಯ ಒಡವೆಗಳಿಗೆ, ಊಟಕ್ಕೆ ಹಾಗೂ ಇತರೆ ಖರ್ಚುಗಳಾಗಿ ಸುಮಾರು ರೂ.ಐದು ಲಕ್ಷ

ಮಾಡಲಾಗಿತ್ತು. ಪುಷ್ಪಲತಾರವರನ್ನು ತುಮಕೂರಿನ ಸಿದ್ಧಾರ್ಥ ಆಸ್ಪತ್ರೆ ಹಾಗೂ ಬೆಂಗಳೂರಿನ ಇತರೆ ಆಸ್ಪತ್ರೆಗಳಿಗೆ ದಾಖಲಿಸಲಾಗಿತ್ತು. ಆ ಆಸ್ಪತ್ರೆಗಳಿಗೆ ಎಷ್ಟು ಹಣ ಖರ್ಚಾಗಿತ್ತು ಎಂಬುದು ನನಗೆ ಗೊತ್ತಿಲ್ಲ. ಮಮತಾರವರ ಗಂಡ ರಾಮಕೃಷ್ಣರವರನ್ನು ಕಳೆದ 12 ವರ್ಷಗಳ ಹಿಂದೆ ತುಮಕೂರಿನ ಆಸ್ಪತ್ರೆಗೆ ಸೇರಿಸಲಾಗಿತ್ತು. ಸುಮಾರು 3 ರಿಂದ 4 ತಿಂಗಳುಗಳ ಕಾಲ ಆಸ್ಪತ್ರೆಯಲ್ಲಿಯೇ ಇದ್ದರು. ಆಸ್ಪತ್ರೆಗೆ ಎಷ್ಟು ಖರ್ಚಾಗಿತ್ತು ಎಂಬುದು ನನಗೆ ಗೊತ್ತಿಲ್ಲ.

ಭೀಮಣ್ಣನಿಗೆ ಅವರ ತಂದೆಯಿಂದ ಸುಮಾರು ಪಿತ್ರಾರ್ಜಿತ ಆಸ್ತಿಗಳು ಬಂದಿರುತ್ತವೆ. ಭೀಮಣ್ಣನವರು ವ್ಯವಸಾಯ ಮಾಡುತ್ತಿದ್ದರು. ಭೀಮಣ್ಣನವರು ತಮ್ಮ ಪಿತ್ರಾರ್ಜಿತ ಆಸ್ತಿಗಳಲ್ಲಿ ಬಂದ ಆದಾಯದಿಂದ ಇತರೆ ಆಸ್ತಿಗಳನ್ನು ಖರೀದಿಸಿದರು ಎಂದರೆ ಸರಿಯಲ್ಲ. 2020 ಮತ್ತು 2024 ನೇ ಸಾಲಿನಲ್ಲಿ ಕೆಲವು ಆಸ್ತಿಗಳನ್ನು ಖರೀದಿಸಿದ್ದರು. ಸುಮಾರು 4 ರಿಂದ 5 ಆಸ್ತಿಗಳನ್ನು ಖರೀದಿಸಿದ್ದು, ಅವುಗಳ ಒಟ್ಟು ವಿಸ್ತೀರ್ಣ 18 ಗುಂಟೆ ಆಗಿರುತ್ತದೆ. ಆ 18 ಗುಂಟೆ ಆಸ್ತಿಯ ಪೈಕಿ ಸರ್ವೆ ನಂಬರ್ 8/5 ರ ಆಸ್ತಿ ಇರುತ್ತದೆ. ಆ ಆಸ್ತಿಯನ್ನು ಭೀಮಣ್ಣನವರು ಸುಮಾರು 6 ರಿಂದ 7 ಲಕ್ಷಗಳಿಗೆ ಖರೀದಿಸಿದ್ದರು. ಆ ಕ್ರಯ ಪತ್ರಕ್ಕೆನಾನು ಸಹಿ ಮಾಡಿರುತ್ತೇನೆ. ಅದೇ ರೀತಿ 2024 ನೇ ಸಾಲಿನಲ್ಲಿ ಬಾಣಗಾನಹಳ್ಳಿಯಲ್ಲಿ ಆಸ್ತಿಯನ್ನು ರೂ.ಮೂವತ್ತೈದು ಲಕ್ಷಗಳಿಗೆ ಖರೀದಿಸಿದ್ದು, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಆ ಕ್ರಯ ಪತ್ರಕ್ಕೆ

ನಾನು ಸಹಿ ಮಾಡಿರುವುದಿಲ್ಲ. ಭೀಮಣ್ಣನವರು ಬೆಂಗಳೂರು ಮತ್ತು ರಾಮಾಪುರದಲ್ಲಿ ಕುರಿ ವ್ಯಾಪಾರ ಮಾಡುತ್ತಿದ್ದರು. ದಾವಾ ಆಸ್ತಿಗಳಲ್ಲಿ ಅಡಿಕೆ ತೋಟ ಇದೆ. ಭೀಮಣ್ಣನವರು ಸುಮಾರು 20 ಕಿ.ಮೀ. ದೂರವಿರುವ ಊರಿನಲ್ಲಿ ಅಡಿಕೆ ತೋಟವನ್ನು ಚೇಣಿಗೆ ತೆಗೆದುಕೊಳ್ಳುತ್ತಿದ್ದರು. ದೊಡ್ಡಗುಳದ ಕದರಪ್ಪನವರಿಂದ ಅಡಿಕೆ ತೋಟವನ್ನು ಚೇಣಿಗೆ ಪಡೆದುಕೊಂಡಿದ್ದರು. ಉಳಿದವರ ಹೆಸರು ನನಗೆ ಗೊತ್ತಿಲ್ಲ. ದೊಡ್ಡಗುಳ ನಮ್ಮ ಊರಿನಿಂದ 15 ರಿಂದ 16 ಕಿ.ಮೀ. ದೂರದಲ್ಲಿದೆ. ನನಗೂ ಹಾಗೂ ಭೀಮಣ್ಣ ವಿಶ್ವಾಸಿಗರು. ಆ ಕಾರಣ ನಾನು ಸುಳ್ಳು ಸಾಕ್ಷ್ಯಪ್ರಮಾಣ ತಯಾರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ